VOL.10 ISSUE 01 31 DECEMBER 2025

# E-STREET VOICE



A MONTHLY NEWSLETTER FROM BOSCO BENGALURU

**'ಕಾಗದದಮೇಲಿನಹಕ್ಕುಗಳಿಂದ' ಆಚರಣೆಯಲ್ಲಿರುವಹಕ್ಕುಗಳ' ವರೆಗೆ...**

೨೦೨೫ನೇ ವರ್ಷವು ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯ (ಯು.ಡಿ.ಎಚ್.ಆರ್) ೭೭ನೇ ವಾರ್ಷಿಕಾಚರಣೆಯನ್ನು ಸೂಚಿಸುತ್ತದೆ. ೨೦೨೫ ಡಿಸೆಂಬರ್ ೧೦ರಂದು ಆಚರಿಸಲಾಗುವ ಮಾನವ ಹಕ್ಕುಗಳ ದಿನಾಚರಣೆಯ ಧ್ಯೇಯವಾಕ್ಯವೆಂದರೆ,"ಮಾನವ ಹಕ್ಕುಗಳು, ನಮ್ಮ ದೈನಂದಿನ ಅಗತ್ಯಗಳು". ಸಮಾನತೆ, ನ್ಯಾಯ ಮತ್ತು ಘನತೆಯಂತಹ ಮೂಲಭೂತ ಹಕ್ಕುಗಳು ಅಮೂರ್ತ ಆದರ್ಶಗಳಿಗಿಂತ ದೈನಂದಿನ ಅವಶ್ಯಕತೆಗಳಾಗಿವೆ ಮತ್ತು ಅವುಗಳನ್ನು ದೈನಂದಿನ ಜೀವನ, ನೀತಿಗಳು ಮತ್ತು ಸಮುದಾಯಗಳಲ್ಲಿ ಸಂಯೋಜಿಸಬೇಕು ಎಂದು ಈ ವಿಷಯವು ಒತ್ತಿ ಹೇಳುತ್ತದೆ. ಶುದ್ಧ ನೀರು, ಶಿಕ್ಷಣ, ಆರೋಗ್ಯ ರಕ್ಷಣೆ ಮತ್ತು ಸುರಕ್ಷತೆಯನ್ನು ಒದಗಿಸುವಲ್ಲಿ ಮಾನವ ಹಕ್ಕುಗಳ ಅಗತ್ಯ ಪಾತ್ರವನ್ನು ಎತ್ತಿ ತೋರಿಸುವ ಮೂಲಕ, ಈ ಹಕ್ಕುಗಳ ಪ್ರಾಯೋಗಿಕ ಪ್ರಭಾವದೊಂದಿಗೆ ಜನರನ್ನು ಮರುಸಂಪರ್ಕಿಸಲು ಈ ಧ್ಯೇಯೋದ್ದೇಶವು ಪ್ರಯತ್ನಿಸಿದಲ್ಲದೆ ಅವು ಪ್ರತಿಯೊಬ್ಬರ ಯೋಗಕ್ಷೇಮಕ್ಕೆ ಸಾಧಿಸಬಹುದಾದ ಅಡಿಪಾಯವನ್ನು ರೂಪಿಸುತ್ತವೆ ಎಂದು ಸಾರಿ ಹೇಳುತ್ತದೆ.

ಮಾನವಹಕ್ಕುಗಳ ದಿನಾಚರಣೆಯ ಸದುದ್ದೇಶದ ಹೊರತಾಗಿಯೂ, ೨೦೨೫ ರ ಆಚರಣೆಯುಗಮನಾರ್ಹ ಸವಾಲುಗಳ ನಡುವೆ ನಡೆಯುತ್ತದೆ. ಗಾಜಾ, ಯುಕ್ರೇನ್ ಮತ್ತು ಸುಡಾನ್‌ನಂತಹ ಸಂಘರ್ಷ ವಲಯಗಳಿಂದಹಿಡಿದು ಸ್ಥಾಪಿತ ಪ್ರಜಾಪ್ರಭುತ್ವಗಳಲ್ಲಿ ಭಿನ್ನಾಭಿಪ್ರಾಯವನ್ನು ನಿಗ್ರಹಿಸುವವರೆಗೆ, ಮಾನವ ಹಕ್ಕುಗಳ ತತ್ವಗಳುಮತ್ತು ಜೀವಂತ ವಾಸ್ತವತೆಗಳ ನಡುವಿನ ಅಂತರವು ಇನ್ನೂ ವಿಸ್ತಾರಗೊಳ್ಳುತ್ತದೆ. ಡಿಜಿಟಲ್ ಕಣ್‌ಗಾವಲು, ಕೃತಕಬುದ್ಧಿಮತ್ತೆಯಲ್ಲಿ ಅಲ್‌ಗಾರಿದಮಿಕ್ ಪಕ್ಷಪಾತಮತ್ತು ತಪ್ಪು ಮಾಹಿತಿಯ ಶಸ್ತ್ರಾರ್ಥಗಳಂತಹ ಉದ್ಯೋನ್ಮುಖ ಸಮಸ್ಯೆಗಳು ವೈಯಕ್ತಿಕ ಘನತೆಗೆ ಕುಂದು ತರುವ ಬೆದರಿಕೆಯನ್ನು ತಂದೊಡ್ಡುತ್ತವೆ ಎಂದು ಕೆಲವು ತಜ್ಞರು ಅಭಿಪ್ರಾಯಪಡುತ್ತಾರೆ.

ಮಾನವಹಕ್ಕುಗಳ ದಿನವು ಮಾನವೀಯತೆಯ ನೈತಿಕ ಪ್ರಗತಿಯ ವಾರ್ಷಿಕ ತಪಾಸಣಾ ಕೇಂದ್ರವಾಗಿದೆ. ೨೦೨೫ ರ ಥೀಮ್, "ನಮ್ಮ ದೈನಂದಿನ ಅಗತ್ಯಗಳು", ಜೀವನವನ್ನು ಯೋಗ್ಯವಾಗಿಸುವ ಮೂಲಭೂತ ಅಗತ್ಯಗಳ ಮೇಲೆ ಗಮನವನ್ನು ಕೇಂದ್ರಿಕರಿಸುತ್ತದೆ. ಅಂತಾರಾಷ್ಟ್ರೀಯಮಾನವ ಹಕ್ಕುಗಳ ಚೌಕಟ್ಟಿಗೆ ನಡೆಯುತ್ತಿರುವ ಸವಾಲುಗಳ ಹೊರತಾಗಿಯೂ, ಮಾನವ ಹಕ್ಕುಗಳ ಸಾರ್ವತ್ರಿಕಘೋಷಣೆಯ ಚೈತನ್ಯವು ವಿಶ್ವದಾದ್ಯಂತ ದೈನಂದಿನ ಧೈರ್ಯ, ಸಹಾನುಭೂತಿ ಮತ್ತು ಪ್ರತಿರೋಧದ ಕಾರ್ಯಗಳಲ್ಲಿ ಮುಂದುವರಿಯುತ್ತದೆ.

ಸಂದೇಶವುಸ್ಪಷ್ಟವಾಗಿದೆ: ಮಾನವ ಹಕ್ಕುಗಳು ನಮ್ಮಲ್ಲಿಪ್ರತಿಯೊಬ್ಬರಿಂದಲೂ ಪ್ರಾರಂಭವಾಗುತ್ತವೆ. ಅವು ನಮ್ಮ ಆಯ್ಕೆಗಳಲ್ಲಿ ಪ್ರತಿಫಲಿಸುತ್ತವೆ, ನಮ್ಮ ಧ್ವನಿಗಳ ಮೂಲಕವ್ಯಕ್ತವಾಗುತ್ತವೆ ಮತ್ತು ನಮ್ಮ ಸಾಮೂಹಿಕ ಕ್ರಮದಿಂದ ರಕ್ಷಿಸಲ್ಪಡುತ್ತವೆ. ನಾವು ಈ ದಿನವನ್ನುಆಚರಿಸುವಾಗ, ಯು.ಡಿ.ಎಚ್.ಆರ್. ಅನ್ನು ಅಂಗೀಕರಿಸುವುದನ್ನು ನೆನಪಿಸಿಕೊಳ್ಳುವುದಲ್ಲದೆ, ಅದರ ತತ್ವಗಳನ್ನು ನಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳುವುದಾಗಿ ಪ್ರತಿಜ್ಞೆ ಮಾಡೋಣ. ನಿಜವಾದ ಮಾನವ ಹಕ್ಕುಗಳ ಅರಿವು ಎಂದರೆ ಹಂಚಿಕೊಂಡ ಪ್ರತಿಯೊಂದು ಊಟ, ವ್ಯಕ್ತಪಡಿಸಿದ ಪ್ರತಿಯೊಂದು ಅಭಿಪ್ರಾಯ ಮತ್ತು ದಯೆಯ ಪ್ರತಿಯೊಂದು ಕ್ರಿಯೆಯು ಸಾರ್ವತ್ರಿಕವಾದ, ಅಗತ್ಯವಾದ ಮತ್ತು ಎತ್ತಿ ಹಿಡಿಯಲು ಮತ್ತು ರಕ್ಷಿಸಲು ನಮ್ಮ ಹಕ್ಕುಗಳ ದೃಢೀಕರಣವಾಗಿದೆ ಎಂಬುದನ್ನು ತಿಳಿಸುತ್ತದೆ.

ಫಾ. ಕೆ.ಜೆ. ಜೋಸೆಫ್, SDB

# ಬೀದಿ ಸನ್ನಿಧಿ (ರಕ್ಷಣೆ ಮತ್ತು ಪುನರ್ವಸತಿ)

## ಬೊಸ್ಕೊ ನಿವಾಸ್

ಕಣ್ಣಿನ ತಪಾಸಣಾ ಶಿಬಿರವನ್ನು ಡಿಸೆಂಬರ್ 3, 2025 ರಂದು ಬೆಂಗಳೂರಿನ ಡಿಜೆ ಹಳ್ಳಿಯಲ್ಲಿ ಎಂಬತ್ತಮೂರು ಸಮುದಾಯದ ಜನರಿಗೆ ನಡೆಸಲಾಯಿತು



## ಬೊಸ್ಕೊ ನಿಲಯ

ಡಿಸೆಂಬರ್ 19, 2025 ರಂದು ಬೀದಿಗಳಲ್ಲಿ ವಾಸಿಸುವ ಜನರಿಗೆ ಬೆಡ್ ಶೀಟ್‌ಗಳನ್ನು ವಿತರಿಸುವ ಮೂಲಕ ಬಡವರ ದಿನವನ್ನು ಆಯೋಜಿಸಲಾಯಿತು



## ಎ.ಆರ್.ಎಸ್.ಪಿ

ಡಿಸೆಂಬರ್ 31, 2025 ರಂದು ಕೆಜೆಎಂ ರೈಲ್ವೆ ನಿಲ್ದಾಣದಿಂದ ಕೆಎಸ್‌ಆರ್ ರೈಲ್ವೆ ನಿಲ್ದಾಣಕ್ಕೆ ಚಲಿಸುವ ರೈಲಿನಲ್ಲಿ ಪ್ರಯಾಣಿಕರಿಗೆ ಮಕ್ಕಳ ಹಕ್ಕುಗಳು ಮತ್ತು ಮಕ್ಕಳ ಸಂಬಂಧಿತ ಕಾನೂನುಗಳ ಕುರಿತು ಜಾಗೃತಿ ಮೂಡಿಸಲಾಯಿತು



## ಬಸ್ ನಿಲ್ದಾಣ

ಡಿಸೆಂಬರ್ 30, 2025 ರಂದು ಮಕ್ಕಳ ಹಕ್ಕುಗಳು ಮತ್ತು ಮಕ್ಕಳ ಸಂಬಂಧಿತ ವಿಷಯಗಳ ಕುರಿತು ಸಾಧನಾ ಮಹಿಳಾ ಸಂಘದ ಸದಸ್ಯರಿಗೆ ಬಸ್ ನಿಲ್ದಾಣದಲ್ಲಿ ವಿಶೇಷ ಜಾಗೃತಿ ಕಾರ್ಯಕ್ರಮ ನಡೆಯಿತು.



## ಮಾಗಡಿ ರಸ್ತೆ

ಡಿಸೆಂಬರ್ 8, 2025 ರಂದು ಬೆಂಗಳೂರಿನ ಕೇಶವ ನಗರದ ಸೇಂಟ್ ಲಾರ್ಡ್ ಇಂಟರ್ನ್ಯಾಷನಲ್ ಶಾಲೆಯ ಅರವತ್ತಮೂರು ಮಕ್ಕಳಿಗೆ ಮಕ್ಕಳ ಹಕ್ಕುಗಳು, ಮಕ್ಕಳ ರಕ್ಷಣೆ ಮತ್ತು ಚಿಲ್ಲೈನ್ ಸಹಾಯವಾಣಿ 1098/112 ಕುರಿತು ಜಾಗೃತಿ ಮೂಡಿಸಲಾಯಿತು..



## ಗಾಂಧಿನಗರ ಪ್ರದೇಶ

ಡಿಸೆಂಬರ್ 16, 2025 ರಂದು ನೂರ ಎಂಟು ಆಯುರ್ವೇದ ವೈದ್ಯಕೀಯ ಕಾಲೇಜು ವಿದ್ಯಾರ್ಥಿಗಳಿಗೆ ಜಾಗೃತಿ



# ಘಟಕಗಳು:

## ಸಿ.ಎಸ್.ಎನ್.

ರಕ್ಷಣೆಗಳು: ಡಿಸೆಂಬರ್ 9, 2025 ರಂದು ವಿದ್ಯಾರಣ್ಯ ಪೊಲೀಸ್ ಠಾಣೆ ವ್ಯಾಪ್ತಿಯಿಂದ ಇಬ್ಬರು ಮಕ್ಕಳನ್ನು ರಕ್ಷಿಸಿ ಸರ್ಕಾರಿ ಬಾಲಕರ ಗೃಹಕ್ಕೆ ದಾಖಲಿಸಲಾಯಿತು.



## ಪೋಷಕತ್ವ ಕಾರ್ಯಕ್ರಮ

ಡಿಸೆಂಬರ್ 13, 2025 ರಂದು ಪಾಲನೆ ಆರೈಕೆಯ ಪರಿಕಲ್ಪನೆಯ ಕುರಿತು ಬೆಂಗಳೂರು ನಗರದ ಬಿ ನಾರಾಯಣಪುರದ ಅಂಗನವಾಡಿ ಕಾರ್ಯಕರ್ತೆಯರಿಗೆ ಜಾಗೃತಿ ಕಾರ್ಯಕ್ರಮ.




## ಆರೋಗ್ಯ ರಕ್ಷಣಾ ಕಾರ್ಯಕ್ರಮ

ಡಿಸೆಂಬರ್ 11, 2025 ರಂದು ಸೇಂಟ್ ಮಾರ್ಥಾಸ್ ಆಸ್ಪತ್ರೆ ತಂಡದಿಂದ ಬೊಸ್ಕೊ ಮನೆಯ ಇಪ್ಪತ್ತೆಂಟು ಮಕ್ಕಳಿಗೆ ಆರೋಗ್ಯ ಜಾಗೃತಿ ಕಾರ್ಯಕ್ರಮ.



## ಸಿ.ಆರ್.ಐ.ಎಸ್.ಪಿ




ಡಿಸೆಂಬರ್ 2, 2025 ರಂದು ನೆಲಮಂಗಲದ ಅಂಬೇಡ್ಕರ್ ನಗರದ ಸರ್ಕಾರಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗಾಗಿ ರಾಷ್ಟ್ರೀಯ ಮಾಲಿನ್ಯ ನಿಯಂತ್ರಣ ದಿನವನ್ನು ಆಯೋಜಿಸಲಾಯಿತು. ವಿವಿಧ ರೀತಿಯ ಮಾಲಿನ್ಯ, ಸ್ವಚ್ಛತೆ ಮತ್ತು ಆರೋಗ್ಯಕರ ಪರಿಸರಕ್ಕಾಗಿ ಕ್ರಮಗಳ ಕುರಿತು ಜಾಗೃತಿ ಮೂಡಿಸಲಾಯಿತು.

## ಕಾನೂನು ಸಂಘರ್ಷಕ್ಕೆ ಒಳಗಾದ ಮಕ್ಕಳ ವಕಾಲತ್ತು ಕಾರ್ಯಕ್ರಮ



ಡಿಸೆಂಬರ್ 23, 2025 ರಂದು ನಿರ್ದೇಶಕ ಫಾ. ಜೋಸೆಫ್ ದಂಡಾವತಿ ಮತ್ತು ಕಾನೂನು ಸಂಘರ್ಷಕ್ಕೆ ಒಳಗಾದ ಮಕ್ಕಳ ವಕಾಲತ್ತು ಕಾರ್ಯಕ್ರಮ ತಂಡದವರಿಂದ ವೀಕ್ಷಣಾ ಗೃಹಕ್ಕೆ ಭೇಟಿ ಮತ್ತು ಮಕ್ಕಳು ಮತ್ತು ಜೆಜೆಬಿ ಸದಸ್ಯರೊಂದಿಗೆ ಸಂವಾದ

## ಮಾನವ ಸಂಪನ್ಮೂಲ ಅಭಿವೃದ್ಧಿ



ಓರಿಯಂಟೇಶನ್ ಪ್ರೋಗ್ರಾಂ - ಮೂಡುಬಿದಿರೆಯ ಆಳ್ವಾಸ್ ಕಾಲೇಜಿನ ಹದಿನೆಂಟು MSW ವಿದ್ಯಾರ್ಥಿಗಳು ಮತ್ತು ಇಬ್ಬರು ಸಿಬ್ಬಂದಿಗೆ ಬೊಸ್ಕೊ ಬೆಂಗಳೂರಿನ ಅಧ್ಯಯನ ಪ್ರವಾಸದ ಭಾಗವಾಗಿ ಓರಿಯಂಟೇಶನ್ ಪ್ರೋಗ್ರಾಂ ಅನ್ನು ನಡೆಸಲಾಯಿತು.

## ಆರ್‌ಎಂಟಿ

ಕ್ರಿಸ್‌ಮಸ್ ಆಚರಣೆಯ ಭಾಗವಾಗಿ ಡಿಸೆಂಬರ್ 2025 ರಲ್ಲಿ ಆರ್‌ಎಂಟಿ ತಂಡವು ಆಯೋಜಿಸಿದ ಸಿಎಸ್‌ಆರ್ ಚಟುವಟಿಕೆಗಳು



## ಕುಟುಂಬದ ಪುನರ್‌ಸ್ಥಾಪನೆ ಮತ್ತು ನಂತರದ ಆರೈಕೆ

ತಮ್ಮ ಕುಟುಂಬಗಳಿಗೆ ಮರಳಿದ ಮಕ್ಕಳ ಕುಟುಂಬಗಳಿಗೆ ಮನೆ ಭೇಟಿಗಳು



## ವಲಸಿಗರ ಸಹಾಯ ಕೇಂದ್ರ

ಡಿಸೆಂಬರ್ 2025 ರಲ್ಲಿ ಬೆಂಗಳೂರು ನಗರ ಮತ್ತು ಗ್ರಾಮೀಣ ಪ್ರದೇಶದ ವಲಸೆ ಸಮುದಾಯಗಳಿಗೆ ಆಹಾರ ಕಿಟ್‌ಗಳನ್ನು ವಿತರಿಸಲಾಯಿತು.

.



# ಮಕ್ಕಳ ಆರೈಕೆ ಸಂಸ್ಥೆಗಳು

## ಬೊಸ್ಕೊ ಮನೆ

ನಕ್ಷತ್ರ ೨೦೨೫ - ಡಿಸೆಂಬರ್ ೨೧, ೨೦೨೫ ರಂದು ಭೂಮಿ ಸಂಸ್ಥೆ ಆಯೋಜಿಸಿದ್ದ ಮೆಗಾ-ಪ್ರತಿಭಾನ್ವಿತ ಕಾರ್ಯಕ್ರಮ "ನಕ್ಷತ್ರ ೨೦೨೫" ನಲ್ಲಿ ಬೊಸ್ಕೊ ಮನೆಯ ಇಪ್ಪತ್ತೆಂಟು ಪ್ರತಿಭಾನ್ವಿತ ಮಕ್ಕಳು ಭಾಗವಹಿಸಿದ್ದರು.




## ಬೊಸ್ಕೊ ವಿಕಾಸ್

ಪೋಷಕರ ಸಭೆಯನ್ನು ಡಿಸೆಂಬರ್ 25, 2025 ರಂದು ಆಯೋಜಿಸಲಾಗಿತ್ತು. ಎಪ್ಪತ್ತೇಳು ಮಕ್ಕಳು ಮತ್ತು ಎಪ್ಪತ್ತು ಪೋಷಕರು ಸಭೆಯಲ್ಲಿ ಭಾಗವಹಿಸಿದ್ದರು.



## ಬೊಸ್ಕೊ ರೇನ್ಬೋ ಹೋಮ್

ಡಿಸೆಂಬರ್ 17, 2025 ರಂದು DCPO ಶ್ರೀಮತಿ ಲೀಮಾ ಅವರು ಬೊಸ್ಕೊ ರೇನ್ಬೋ ಹೋಂಗೆ ಭೇಟಿ ನೀಡಿದರು



## ಬೊಸ್ಕೊ ವಾತ್ಸಲ್ಯ ಭವನ

ಡಿಸೆಂಬರ್ 12, 2025 ರಂದು ಮೂವತ್ತು ಟೈಲರಿಂಗ್ ತರಬೇತಿದಾರರು ಮತ್ತು ರಿಸೆಪ್ಷನ್ ಯುನಿಟ್ ಮಕ್ಕಳಿಗಾಗಿ ದಂತ ಶಿಬಿರವನ್ನು ಆಯೋಜಿಸಲಾಗಿತ್ತು



## ಬೊಸ್ಕೊ ಯುವಕೇಂದ್ರ

ಡಿಸೆಂಬರ್ 26, 2025 ರಂದು ಅಜ್ಜನಹಳ್ಳಿ ಡಾನ್ ಬೊಸ್ಕೊ ಕೇಂದ್ರದಲ್ಲಿ ಕೇಂದ್ರದ ಯುವಕರಿಗಾಗಿ ಪಿಕ್ನಿಕ್ ಆಯೋಜಿಸಲಾಗಿತ್ತು.




## ಬೊಸ್ಕೊ ಯುವೋದಯ

ಡಿಸೆಂಬರ್ 10, 2025 ರಂದು ಅಂತರರಾಷ್ಟ್ರೀಯ ಮಾನವ ಹಕ್ಕುಗಳ ದಿನದ ಅಂಗವಾಗಿ ಒಪನ್ ಶೆಲ್ಟರ್ ಮಕ್ಕಳ ಚಟುವಟಿಕೆಗಳು



## ಬೊಸ್ಕೊ ಸುಮನಹಳ್ಳಿ

ಡಿಸೆಂಬರ್ 9, 2025 ರಂದು
ಮೂವತ್ತನಾಲ್ಕು ಪ್ರಶಿಕ್ಷಣಾರ್ಥಿಗಳಿಗೆ
ಸಮಯ ನಿರ್ವಹಣೆಯ ಕುರಿತು
ಜೀವನ ಕೌಶಲ್ಯ ಅಧಿವೇಶನಲಾಗಿತ್ತು



## ಬೊಸ್ಕೊ ಕೇಂದ್ರಗಳಲ್ಲಿ ಅಂತರಾಷ್ಟ್ರೀಯ ಮಾನವ ಹಕ್ಕುಗಳ ದಿನ

ಅಂತರಾಷ್ಟ್ರೀಯಮಾನವ ಹಕ್ಕುಗಳ ದಿನದ ಸಂದರ್ಭದಲ್ಲಿ, ಡಿಸೆಂಬರ್೧೦, ೨೦೨೫ ರಂದು ಬೊಸ್ಕೊ ಕೇಂದ್ರಗಳು ಮತ್ತು ಪ್ರದೇಶಗಳ ಮಕ್ಕಳು ಮತ್ತು ಯುವಜನರಿಗೆ ಮಾನವ ಹಕ್ಕುಗಳ ಕುರಿತು ಅಧಿವೇಶನವನ್ನು ನಡೆಸಲಾಯಿತು. ಈ ವರ್ಷದ ಥೀಮ್ 'ಮಾನವ ಹಕ್ಕುಗಳು, ನಮ್ಮ ದೈನಂದಿನ ಅಗತ್ಯಗಳು'. ಕೇಂದ್ರಗಳ ನಿರ್ದೇಶಕರು ಮತ್ತು ಸಂಯೋಜಕರು ಮಕ್ಕಳನ್ನು ಉದ್ದೇಶಿಸಿ ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯನ್ನು ವಿವರಿಸಿದರಲ್ಲದೆ ದಿನದ ಮಹತ್ವದ ಬಗ್ಗೆ ಜಾಗೃತಿ ಮೂಡಿಸಿದರು. ಪ್ರಸ್ತುತ ಸನ್ನಿವೇಶದಲ್ಲಿ ಆಗುತ್ತಿರುವ ಉದ್ದೇಶಗಳು, ಮಾನವ ಹಕ್ಕುಗಳ ಮಹತ್ವ ಮತ್ತು ಅವುಗಳ ಉಲ್ಲಂಘನೆಗಳನ್ನು ವಿವರಿಸಿದರು. ಇದರ ಜೊತೆಗೆ ಮಕ್ಕಳು ಗೌರವಯುತ ಜೀವನ ನಡೆಸುವುದರ ಕುರಿತು ಅರಿವು ಮೂಡಿಸಲಾಯಿತು. ಬೊಸ್ಕೊ ಸಿ.ಆರ್.ಐ.ಎಸ್.ಪಿ. ಯೋಜನೆಯಿಂದ ಶಾಲೆಗಳಲ್ಲಿ ಜಾಗೃತಿ ಮೂಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ಬೊಸ್ಕೊ ಕೇಂದ್ರ ಹಾಗೂ ಪ್ರದೇಶಗಳ ಮಕ್ಕಳು ಭಾಗವಹಿಸಿದ್ದರು.





# ಓರಿಯಂಟೇಶನ್ ಕಾರ್ಯಕ್ರಮ

ಮೂಡುಬಿದಿರೆಯ ಆಳ್ವಾಸ್ ಕಾಲೇಜಿನ ಸಮಾಜಸೇವಾ ವಿಭಾಗದ ವಿದ್ಯಾರ್ಥಿಗಳು ಡಿಸೆಂಬರ್ ೧೬, ೨೦೨೫ ರಂದು ಬೆಂಗಳೂರಿನ ಬೊಸ್ಕೊ ಸಂಸ್ಥೆಗೆ ಭೇಟಿ ನೀಡಿದರು. ಬೊಸ್ಕೊ ಮನೆಯ ನಿರ್ದೇಶಕರಾದ ಫಾ. ಕೆ.ಜೆ.ಜೋಸೆಫ್ ಅವರು ಬೊಸ್ಕೊ ಸಂಸ್ಥೆ ಮತ್ತು ಅದರ ಚಟುವಟಿಕೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ಅವರು ಬೊಸ್ಕೊ ಬೆಂಗಳೂರಿನ ಇತಿಹಾಸ, ಅದರ ದೃಷ್ಟಿಕೋನ ಮತ್ತು ಧ್ಯೇಯಗಳು ಮತ್ತು ಸಂಸ್ಥೆಯ ವಿವಿಧ ಕಾರ್ಯಕ್ರಮ ಮತ್ತು ಯೋಜನೆಗಳ ಬಗ್ಗೆ ವಿವರಿಸಿದರು.

ಹಾಗೆಯೇ, ಕಾರ್ಯಕ್ರಮದ ಮುಂದಿನ ಭಾಗವಾಗಿ, ವಿದ್ಯಾರ್ಥಿಗಳು ಸಂಸ್ಥೆಯ ಸೇವಾಕಾರ್ಯವನ್ನು ಅಚ್ಚುಕಟ್ಟಾಗಿ ಅರ್ಥೈಸಿಕೊಳ್ಳಲು ದೃಶ್ಯ ಮಾಧ್ಯಮದ ಮೂಲಕ ವಿವರಿಸಲಾಯಿತು. ನಂತರ ವಿದ್ಯಾರ್ಥಿಗಳು ವಾತ್ಸಲ್ಯ ಭವನಕ್ಕೆ ಭೇಟಿ ನೀಡಿ, ಕೇಂದ್ರದ ಕಾರ್ಯವೈಖರಿ ಬಗ್ಗೆ ಪ್ರತ್ಯಕ್ಷವಾಗಿ ಮಾಹಿತಿ ಕಲೆಹಾಕಿದರು.

ಈ ಭೇಟಿಯಿಂದ ಆಳ್ವಾಸ್ ವಿದ್ಯಾರ್ಥಿಗಳು ಬೊಸ್ಕೊ ಸಂಸ್ಥೆಯ ಗುರಿ ಮತ್ತು ಉದ್ದೇಶ ಮತ್ತು ಅದರ ಕಾರ್ಯಕ್ರಮ ಮತ್ತು ಯೋಜನೆಗಳ ಬಗ್ಗೆ ಉತ್ತಮ ಸ್ಪಷ್ಟತೆ ಪಡೆದರಲ್ಲದೆ ಈ ಭೇಟಿಯಿಂದ ವಿದ್ಯಾರ್ಥಿಗಳು ಹೊಸ ತಿಳುವಳಿಕೆ ಮತ್ತು ಅವರ ಶೈಕ್ಷಣಿಕ ಕಲಿಕೆಗೆ ಪೂರಕವಾದಂತಹ ಅಂಶಗಳನ್ನು ಪಡೆದುಕೊಂಡರು. ಹದಿನೆಂಟು ವಿದ್ಯಾರ್ಥಿಗಳು ಮತ್ತು ಇಬ್ಬರು ಅಧ್ಯಾಪಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

.



## ಹಳೆಯ ವಿದ್ಯಾರ್ಥಿಗಳಗೆಟ್-ಟುಗೆದರ್

ಕೌಶಲ್ಯತರಬೇತಿ ಕೇಂದ್ರ ಮತ್ತು ಅದರ ಹಳೆಯ ವಿದ್ಯಾರ್ಥಿಗಳ ಸಾಧನೆಗಳನ್ನು ಆಚರಿಸಲು, ಅವರನ್ನು ಮರುಸಂಪರ್ಕಿಸಲು ಮತ್ತು ಅವರ ಪ್ರಸ್ತುತ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಹಾಗೂ ಸದ್ಯಕ್ಕೆ ಸಂಸ್ಥೆಯಲ್ಲಿ ಕಲಿಯುತ್ತಿರುವ ಮಕ್ಕಳ ಮನಸ್ಸುಗಳಲ್ಲಿ ಪ್ರೇರಣೆ ತುಂಬಿಸಲು ೨೦೨೫ ರ ಡಿಸೆಂಬರ್ ೭ ರಂದು ಬೊಸ್ಕೊ ಸುಮ್ಮನಹಳ್ಳಿಯ ಹಳೆಯ ವಿದ್ಯಾರ್ಥಿಗಳಿಗೆ ಒಂದು ಸಮಾಗಮವನ್ನು ಆಯೋಜಿಸಲಾಗಿತ್ತು.




ಈ ಕಾರ್ಯಕ್ರಮವು ಕೌಶಲ್ಯ ತರಬೇತಿ ಕೇಂದ್ರಕ್ಕೆ ಮಹತ್ವದ ಮೈಲಿಗಲ್ಲನ್ನು ಗುರುತಿಸಿದೆ ಎಂದು ಬೊಸ್ಕೊ ಬೆಂಗಳೂರಿನ ಕಾರ್ಯನಿರ್ವಾಹಕ ನಿರ್ದೇಶಕ ಫಾ. ವರ್ಗೀಸ್ ಪಲ್ಲಿಪುರಂ ತಿಳಿಸಿದರು. ಅವರು ಬೊಸ್ಕೊ ಸುಮ್ಮನಹಳ್ಳಿಯಲ್ಲಿ ನೀಡಲಾಗುವ ವಿವಿಧ ತರಬೇತಿಗಳ ಬಗ್ಗೆ ಮಾಹಿತಿ ನೀಡಿದರಲ್ಲದೆ ಕೌಶಲ್ಯ ತರಬೇತಿ ಮಾತ್ರವಲ್ಲದೆ ಸಮಗ್ರ ವೈಯಕ್ತಿಕ ಅಭಿವೃದ್ಧಿಗೆ ಬೇಕಾದ ಮೌಲ್ಯಗಳು ಮತ್ತು ಜೀವನ ಕೌಶಲ್ಯಗಳನ್ನು ಕಲಿಯುವ ತಾಣವಾಗಿದೆ ಎಂದು ಬಣ್ಣಿಸಿದರು. ಇಲ್ಲಿನ ವಿದ್ಯಾರ್ಥಿಗಳಿಗೆ ದೊರೆಯುವ ಸರ್ಕಾರದ ಯೋಜನೆಗಳು ಹಾಗೂ ಇತರೆ ಸವಲತ್ತುಗಳ ಬಗ್ಗೆ ವಿವರಿಸಿದರು. ಬೊಸ್ಕೊ ಸುಮ್ಮನಹಳ್ಳಿಯ ನಿರ್ದೇಶಕ ಫಾ. ಆನಂದ್, ಜೀವನಕ್ಕಾಗಿ ಕೌಶಲ್ಯ ಮತ್ತು ಮೌಲ್ಯಗಳನ್ನು ಪಡೆದುಕೊಳ್ಳುವ ಮಹತ್ವದ ಬಗ್ಗೆ ಆಗಮಿಸಿದ ಎಲ್ಲಾ ಹಳೆಯ ವಿದ್ಯಾರ್ಥಿಗಳಿಗೆ ತಿಳಿಸಿದರು. ಶೈಕ್ಷಣಿಕ ನೆಲೆಯಲ್ಲಿ ಕಲಿತ ಪಾಠಗಳನ್ನು ಹೊರಜಗತ್ತಿನ ನಿಜ ಜೀವನದಲ್ಲೂ ಪಾಲಿಸಬೇಕು ಎಂದು ಕಿವಿಮಾತು ಹೇಳಿದರು. ಅವರೆಲ್ಲರೂ ತಾವು ಬದುಕನ್ನು ರೂಪಿಸಿಕೊಂಡ ಈ ಜಾಗಕ್ಕೆ ಬರಲು ಹಾಗೂ ಇಲ್ಲಿ ಕಲಿಯುತ್ತಿರುವ ಇತರ ವಿದ್ಯಾರ್ಥಿಗಳಿಗೆ ಸಲಹೆಸೂಚನೆ ನೀಡಲು ಕರೆ ನೀಡಿದರು. ಕುಟುಂಬ ಪುನರ್‌ಸ್ಥಾಪನೆ ಮತ್ತು ಆಫ್ಟರ್ ಕೇರ್ ಮ್ಯಾನೇಜರ್ ಶ್ರೀ. ಬಾಲರಾಜ್, ಬೊಸ್ಕೊ ಸೇವಾ ಸಂಸ್ಥೆ ಒದಗಿಸುತ್ತಿರುವ ಕುಟುಂಬ ಪುನರ್‌ಸ್ಥಾಪನೆ ಪ್ರಕ್ರಿಯೆ ಮತ್ತು ನಂತರದ ಆರೈಕೆಯ ಬೆಂಬಲದ ಬಗ್ಗೆ ಮಾಹಿತಿ ನೀಡಿದರು.



ಹಲವಾರು ಹಳೆಯ ವಿದ್ಯಾರ್ಥಿಗಳು ಬೊಸ್ಕೊ ಸಂಸ್ಥೆಯಲ್ಲಿ ತಾವು ಕಳೆದ ಸಮಯ, ಕಲಿತ ವಿಷಯ, ಕಲಿಕೆ ಹಾಗೂ ಅವೆಲ್ಲವೂ ತಮ್ಮ ಮೇಲೆ ಬೀರಿರುವ ಅಗಾಧ ಪ್ರಭಾವದ ಬಗ್ಗೆ ಮನಬಿಚ್ಚಿ ಮಾತನ್ನಾಡಿದರು ಹಾಗೂ ತಮ್ಮ ಬದುಕಿನ ಅತ್ಯಂತ ಸಂದಿಗ್ಧ ಸಮಯದಲ್ಲಿ ಬೊಸ್ಕೊ ಸಂಸ್ಥೆ ತಮ್ಮ ನೆರವಿಗೆ ಬಂದದ್ದಕ್ಕಾಗಿ ಸಂಸ್ಥೆಗೂ ಹಾಗೂ ಇಲ್ಲಿನ ಎಲ್ಲಾ ಗುರುಹಿರಿಯರಿಗೂ ಕೃತಜ್ಞತೆ ಸಲ್ಲಿಸಿದರು. ಈ ಸಮಾಗಮದಿಂದ ಇಲ್ಲಿ ಕಲಿಯುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೂ ಉತ್ತಮ ಪ್ರೇರಣೆಯಾಗಿತ್ತು. ಬೊಸ್ಕೊ ಸುಮ್ಮನಹಳ್ಳಿಯಲ್ಲಿನ ಮೂವತ್ನಾಲ್ಕು ವಿದ್ಯಾರ್ಥಿಗಳು ಹಾಗೂ ಇಪ್ಪತ್ತಾರು ಹಳೆಯ ವಿದ್ಯಾರ್ಥಿಗಳು ಈ ಸಮಾಗಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.

## ಪ್ರಮಾಣಪತ್ರಗಳ ವಿತರಣೆ

ಚಾಮರಾಜಪೇಟೆಯಲ್ಲಿರುವ ಬೊಸ್ಕೊ ಮನೆಯಲ್ಲಿ ಕಂಪ್ಯೂಟರ್ ತರಬೇತಿ ಪಡೆಯುತ್ತಿದ್ದ ವಿದ್ಯಾರ್ಥಿಗಳು ಮೂರು ತಿಂಗಳ ಬೇಸಿಕ್ಸ್ ಮತ್ತು ಟ್ಯಾಲಿ ತರಬೇತಿ ಕೋರ್ಸ್ ಅನ್ನು ಪೂರ್ಣಗೊಳಿಸಿದರ ಪರಿಣಾಮವಾಗಿ ಅವರಿಗೆ ಪ್ರಮಾಣಪತ್ರ ವಿತರಣಾ ಕಾರ್ಯಕ್ರಮವನ್ನು ಡಿಸೆಂಬರ್ ೬, ೨೦೨೫ ರಂದು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಬೊಸ್ಕೊ ಬೆಂಗಳೂರಿನ ಕಾರ್ಯಕಾರಿ ನಿರ್ದೇಶಕರಾದ ಫಾ. ವರ್ಗೀಸ್ ಪಲ್ಲಿಪುರಂ ಅವರು ಪ್ರಾಸ್ತಾವಿಕ ಭಾಷಣ ಮಾಡಿದರು ಮತ್ತು ಸಂಸ್ಥೆಯ ಬಗ್ಗೆ ಅವರೊಂದಿಗೆ ಹಂಚಿಕೊಂಡರು.



ವೃತ್ತಿ ಮತ್ತು ಶಿಕ್ಷಣದಲ್ಲಿ ತಂತ್ರಜ್ಞಾನದ ಮಹತ್ವವನ್ನು ಒತ್ತಿ ಹೇಳಿದರಲ್ಲದೆ ಕೋರ್ಸ್ ಪೂರ್ಣಗೊಳಿಸಿದ ವಿದ್ಯಾರ್ಥಿಗಳನ್ನು ಅಭಿನಂದಿಸಿದರು. ಬೊಸ್ಕೊ ಮನೆಯ ನಿರ್ದೇಶಕರಾದ ಫಾ. ಕೆ ಜೆ ಜೋಸೆಫ್ ಅವರು ಕೋರ್ಸ್ ಪೂರ್ಣಗೊಳಿಸಿದ ವಿದ್ಯಾರ್ಥಿಗಳನ್ನು ಅಭಿನಂದಿಸಿದರು ಮತ್ತು ಕಲಿತ ಕೌಶಲ್ಯಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವಂತೆ ಪ್ರೋತ್ಸಾಹಿಸಿದರು. ಇದೇ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮೇಘಾಲಯದ ಫಾ. ಡೇನಿಯಲ್ ಸಂಗ್ಮಾ ಅವರು ಕೋರ್ಸ್ ಪೂರ್ಣಗೊಳಿಸಿದ ವಿದ್ಯಾರ್ಥಿಗಳನ್ನು ಅಭಿನಂದಿಸಿದರು ಮತ್ತು ಕೆಲವು ಸ್ಫೂರ್ತಿದಾಯಕ ಉಲ್ಲೇಖಗಳೊಂದಿಗೆ ವಿದ್ಯಾರ್ಥಿಗಳನ್ನು ಪ್ರೇರೇಪಿಸಿದರು. ಈ ಕಾರ್ಯಕ್ರಮದಲ್ಲಿ ಕೋರ್ಸ್ ಪೂರ್ಣಗೊಳಿಸಿದ ಇಪ್ಪತ್ತೈದು ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಲಾಯಿತು.

## ಬೊಸ್ಕೊನಲ್ಲಿ ಕ್ರಿಸ್‌ಮಸ್ ಆಚರಣೆ




ಬೊಸ್ಕೊ ಬೆಂಗಳೂರು ತನ್ನ ಸಿಬ್ಬಂದಿ ಮತ್ತು ಸ್ವಯಂಸೇವಕರೊದಿಗೆ ಡಿಸೆಂಬರ್ ೨೦, ೨೦೨೪ ರಂದು ಬೆಂಗಳೂರಿನ ಶಿವಾಜಿನಗರದ ಸೇಂಟ್ ಝೇವಿಯರ್ಸ್ ಪ್ರೌಢಶಾಲಾವರಣದಲ್ಲಿ ಉಲ್ಲಾಸದಿಂದ ಆಚರಿಸಿತು. ಸೇಂಟ್ ಝೇವಿಯರ್ಸ್ ಪ್ರೌಢಶಾಲೆಯ ವ್ಯವಸ್ಥಾಪಕ ಫಾ. ಆರೋಗ್ಯ ರಾಜ್‌ಅವರು ಅತಿಥಿಗಳೆಲ್ಲರನ್ನೂ ಆತ್ಮೀಯವಾಗಿ ಸ್ವಾಗತಿಸುತ್ತಾ ಇದೊಂದು ಐತಿಹಾಸಿಕ ಘಟನೆ ಎಂದು ಬಣ್ಣಿಸಿದರು. ಬೊಸ್ಕೊ ನಿವಾಸ್‌ನ ನಿರ್ದೇಶಕ ಫಾ. ದೇವರಾಜ್ ಅವರು ಸ್ಫೂರ್ತಿದಾಯಕ ಬೈಬಲ್ ಶ್ಲೋಕಗಳನ್ನು ಹಂಚಿಕೊಂಡರೆ, ಬೊಸ್ಕೊ ಬೆಂಗಳೂರಿನ ಕಾರ್ಯಕಾರಿ ನಿರ್ದೇಶಕರಾದ ಫಾ. ವರ್ಗೀಸ್ ಪಲ್ಲಿಪುರಂಅವರು ಕ್ರಿಸ್ಮಸ್ ಕೊಟ್ಟಿಗೆಯನ್ನು ಉದ್ಘಾಟಿಸಿದರು. ಲೋಕದ ಮೇಲಿನ ತಮ್ಮ ಅಪರಿಮಿತ ಪ್ರೀತಿಯ ನಿಮಿತ್ತ ಯೇಸು ಈ ಜಗಕ್ಕೆ ಇಳಿದು ಬಂದರು ಹಾಗೂ ಇಡೀ ಮನುಕುಲವನ್ನು ಪ್ರೀತಿಸಿದರು ಎಂಬ ಕ್ರಿಸ್ಮಸ್ ಸಂದೇಶ ನೀಡುತ್ತಾ ಫಾ. ವರ್ಗೀಸ್ ಪಲ್ಲಿಪುರಂರವರು ಸಿಬ್ಬಂದಿಗಳು ಬೊಸ್ಕೊ ಸಂಸ್ಥೆಗೆ ಕೊಡುಗೆಯಾಗಿದ್ದಾರೆ ಮತ್ತು ಅವರ ದಣಿವರಿಯದ ಸೇವಾಕಾರ್ಯದಿಂದ ಬೊಸ್ಕೊ ಸಂಸ್ಥೆ ಬೆಂಗಳೂರು ನಗರದಲ್ಲಿ ತನ್ನ ಅಸ್ತಿತ್ವವನ್ನು ಕಂಡುಕೊಂಡಿದೆ ಎಂದು ನುಡಿದರು. ತದನಂತರ ಕ್ರಿಸ್ಮಸ್ ಕ್ಯಾರಲ್ಸ್, ನೃತ್ಯ, ಉಡುಗೊರೆ ವಿನಿಮಯ ಮತ್ತು ಬೆಚ್ಚಗಿನ ಋತುವಿನ ಶುಭಾಶಯಗಳಿಂದ ಇಡೀ ಸಂಭ್ರಮದಾಚರಣೆ ತುಂಬಿಕೊಂಡಿತ್ತು. ಇಡೀ ಆಚರಣೆಯಲ್ಲಿ ಎಲ್ಲಾ ಸಿಬ್ಬಂದಿ, ಬೋಧನಾ ಶಿಕ್ಷಕರು, ಸ್ವಯಂಸೇವಕರು ಮತ್ತು ಆಡಳಿತ ಮಂಡಳಿಯು ಅತ್ಯಂತ ಉತ್ಸುಕತೆಯಿಂದ ಭಾಗವಹಿಸಿದರು.




## ಬೊಸ್ಕೊ ಕೇಂದ್ರಗಳಲ್ಲಿ ಕ್ರಿಸ್ಮಸ್ ಆಚರಣೆ

ಬೊಸ್ಕೊ ಕೇಂದ್ರಗಳಾದ ವಾತ್ಸಲ್ಯ ಭವನ, ಯುವಕೇಂದ್ರ, ಯುವೋದಯ, ನಿಲಯ, ನಿವಾಸ್, ರೈನ್‌ಬೋ ಹೋಮ್, ಮನೆ, ವಿಕಾಸ್ ಮತ್ತು ಸುಮ್ಮನಹಳ್ಳಿಯಲ್ಲಿ ಮಕ್ಕಳೊಂದಿಗೆ ಕ್ರಿಸ್ಮಸ್ ಆಚರಣೆಯನ್ನು ಡಿಸೆಂಬರ್ ೧೫ ರಿಂದ ೨೭ರವರೆಗೆ ಅರ್ಥಭರಿತವಾಗಿ ಆಚರಿಸಲಾಯಿತು.




ಬೊಸ್ಕೊ ಸಂಸ್ಥೆಯ ಕಾರ್ಯಕಾರಿ ನಿರ್ದೇಶಕರಾದ ಫಾ. ವರ್ಗೀಸ್ ಪಲ್ಲಿಪುರಂರವರು ಕೊಟ್ಟಿಗೆ ಉದ್ಘಾಟನೆಯಿಂದ ಎಲ್ಲಾ ಕಡೆ ಕ್ರಿಸ್ಮಸ್ ಆಚರಣೆಗೆ ಚಾಲನೆ ನೀಡಿದರು. ಕ್ರಿಸ್ಮಸ್ ಹಬ್ಬದ ಮಹತ್ವ ಮತ್ತು ಮೌಲ್ಯವನ್ನು ಮಕ್ಕಳಿಗೂ ಮತ್ತು ಯುವಜನರಿಗೂ ತಿಳಿಸಲಾಯಿತು.




ಯೇಸುವಿನ ಜನನದ ಕಥೆಯನ್ನು ವಿವರಿಸಲಾಯಿತು. ನಿಸ್ವಾರ್ಥ ಪ್ರೀತಿ ಮತ್ತು ಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ಸಂದೇಶವನ್ನು ನೀಡಲಾಯಿತು. ಮಕ್ಕಳು ನೃತ್ಯ ಮಾಡಿದರು, ಹಾಡುಗಳನ್ನು ಹಾಡಿದರು, ಕುಣಿದುಕುಪ್ಪಳಿಸಿದರು. ಹಾಗೆಯೇ ಮಕ್ಕಳಿಗಾಗಿ ಕೆಲವು ಆಟೋಟ ಸ್ಪರ್ಧೆಯನ್ನು ನಡೆಸಲಾಯಿತು ಮತ್ತು ಹಾಗೂ ಎಲ್ಲರಿಗೂ ಅಚ್ಚರಿಯ ಉಡುಗೊರೆಗಳನ್ನು ನೀಡಲಾಯಿತು.





ನೆರೆದಿದ್ದ ಎಲ್ಲರಿಗೂ ಸಿಹಿತಿಂಡಿ, ಕೇಕ್ ಮತ್ತು ಊಟ ನೀಡಲಾಯಿತು. ವಿವಿಧ ಕೇಂದ್ರಗಳಲ್ಲಿ ನಡೆದ ಸಂಭ್ರಮದಾಚರಣೆಯಲ್ಲಿ ಎಲ್ಲಾ ನಿರ್ದೇಶಕರು, ಕಾರ್ಪೊರೇಟ್ ವಲಯಗಳಿಂದ ವಿವಿಧ ಪಾಲುದಾರರು ಉಪಸ್ಥಿತರಿದ್ದರು. ಎಲ್ಲಾ ಕೇಂದ್ರಗಳ ಮಕ್ಕಳು, ಟ್ಯೂಷನ್ ತರಗತಿಗಳಿಗೆ ಹಾಜರಾಗುವ ಮಕ್ಕಳು, ಶಾಲಾ ಮಕ್ಕಳು, ಯುವಜನರು ಮತ್ತು ಪೋಷಕರು ಸಂಭ್ರಮಾಚರಣೆಯಲ್ಲಿ ಭಾಗಿಯಾಗಿದ್ದರು.



**ಶಿಕ್ಷಣ, ಸಾಹಿತ್ಯ, ಸಂಗೀತ ಮತ್ತು ಸಮಾಜಸೇವಾ ಕ್ಷೇತ್ರದಲ್ಲಿ ತಮ್ಮ ಅಮೋಘ ಸೇವೆಸಲ್ಲಿಸಿರುವ ಫಾ.ಆನಂದ್‌ಅವರಿಗೆ ಡಿಸೆಂಬರ್ 23, 2025, ರಂದು ಬೆಂಗಳೂರಿನ ಆಶಾಕಿರಣ ಕಲಾಟ್ರಸ್ಟ್ "ಮರೆಯದ ಮಾಣಿಕ್ಯ ಪ್ರಶಸ್ತಿ 2025" ಅನ್ನು ನೀಡಿ ಸನ್ಮಾನಿಸಿತು**

# HOMELINK NETWORK
# DECEMBER - 2025

| | Male | Female | Total |
|---|---|---|---|
| Children rescued | 90 | 27 | 117 |
| Service provided | 46 | 07 | 53 |
| Grand Total | 136 | 34 | 170 |

**New Children Data of Contact Centre/Area:**

| | Fresh | | Repeated | | |
|---|---|---|---|---|---|
| Contact Point | Boys | Girls | Boys | Girls | Total |
| Railway Station DCPU Staff | 13 | 08 | 00 | 00 | 21 |
| Bus Stand BMTC | 19 | 03 | 00 | 00 | 22 |
| Bus Stand KSRTC | 10 | 02 | 00 | 00 | 12 |
| BOSCO Yuvakendra | 01 | 00 | 00 | 00 | 01 |
| BOSCO Nivas | 02 | 01 | 00 | 00 | 03 |
| BOSCO Nilaya | 02 | 00 | 00 | 00 | 02 |
| BOSCO Vatsalya Bhavan | 00 | 03 | 00 | 00 | 03 |
| CSN | 05 | 01 | 00 | 00 | 06 |
| ARSP | 37 | 09 | 00 | 00 | 46 |
| Juvenile Advocacy | 01 | 00 | 00 | 00 | 01 |
| TOTAL | 90 | 27 | 00 | 00 | 117 |

**Final Action Taken:**

| Placement | Boys | Girls | Total |
|---|---|---|---|
| Under Follow-up in BOSCO Centres | 06 | 05 | 11 |
| Home Placement (CWC R) | 50 | 08 | 58 |
| Direct Home Placement | 17 | 04 | 21 |
| Admission to Government Homes | 15 | 10 | 25 |
| Referred to other Institutions | 02 | 00 | 02 |
| TOTAL | 90 | 27 | 117 |

Stay Connected With BOSCO

Bangalore Oniyavara Seva Coota

/boscobengaluru